ಮರುದಿನ ನಸುಕಿನಲ್ಲಿ 3 ಗಂಟೆಯ ಸುಮಾರಿಗೇ ಒಂದೇ ಸಮನೆ ಒಲೆಯ ಬಳಿ ಮರಿಗಳ ಕೂಗು ಕೇಳಿ ಬಂತು. ಹತ್ತಿರ ಹೋಗಿ ನೋಡಿದರೆ ಮುಷ್ಟಿ ಗಾತ್ರದ, ಸೊರಗಿದ ಬೆಕ್ಕಿನ ಮರಿಗಳು ಅಲ್ಲಿದ್ದವು. ಮನೆಯವರೆಲ್ಲ ತಾಯಿ ಬೆಕ್ಕಿನ ಬರುವಿಕೆಗೆ ಕಾಯುತ್ತಿದ್ದೆವು. ಸಾಮಾನ್ಯವಾಗಿ ಬೆಳಗ್ಗೆ ಏಳು ಗಂಟೆಯ ಹೊತ್ತಿಗೆ ಅಂಗಳದಲ್ಲಿ ಪ್ರತ್ಯಕ್ಷವಾಗುತ್ತಿದ್ದ ಬೆಕ್ಕಿನ ಸುಳಿವೇ ಇಲ್ಲ. ಮರಿಗಳಂತೂ ಅದುವರೆಗೆ ತಾಯಿ ಬೆಕ್ಕಿನ ಮುಖದ ಹೊರತು ಮನುಷ್ಯರ ಮುಖವನ್ನು ಸರಿಯಾಗಿ ನೋಡಿರಲಿಕ್ಕಿಲ್ಲ ಎನ್ನುವಂತೆ ನಮ್ಮ ಹೆಜ್ಜೆಯ ಸಪ್ಪಳಕ್ಕೇ ಹೆದರಿ ಓಡುತ್ತಿದ್ದವು, ನಡೆಯುವಷ್ಟು ಶಕ್ತಿ ಇಲ್ಲದೆ ಅಲ್ಲಲ್ಲಿ ಕುಸಿದು ಬೀಳುತ್ತಿದ್ದವು.

ಮರಿಗಳ ಅಳು, ಅತ್ತೂ ಅತ್ತೂ ತೋಯ್ದಿದ್ದ ಅವುಗಳ ಕಣ್ಣುಗಳನ್ನು ನೋಡಿ ತಾಯಿ ಬೆಕ್ಕು ಆದಷ್ಟು ಬೇಗ ಬರಲಪ್ಪಾ ಎಂದು ಪ್ರಾರ್ಥಿಸತೊಡಗಿದೆ. ಮೊದಲ ಬಾರಿಗೆ ಅವುಗಳ ಅಳುವಿಗೆ ಅಂತಃಕರಣ ಮಿಡಿಯಿತು. ಬೆಳಗ್ಗೆ ಎಂಟೂವರೆಯಾದರೂ ಬೆಕ್ಕು ಬರದಿದ್ದುದನ್ನು ಕಂಡು ಚಿಂತೆ ಆವರಿಸಿತು. ಒಂದೆಡೆ ಕಚೇರಿಗೆ ಹೋಗುವ ಸಮಯವಾಗುತ್ತಿದೆ, ಇನ್ನೊಂದೆಡೆ ಮರಿಗಳು ಅತ್ತೂ ಅತ್ತೂ ಕೃಶವಾಗಿರುವುದನ್ನು ನೋಡಲಾಗುತ್ತಿಲ್ಲ. ಹಾಲು ಹಾಕಿದರೂ ಕುಡಿಯಲು ಗೊತ್ತಿದೆಯೋ ಇಲ್ಲವೋ ಎಂದು ಯೋಚಿಸುತ್ತಲೇ ಸಿಮೆಂಟಿನ ನೆಲದಲ್ಲಿ ಹಾಲು ಹಾಕಿದೆ. ಅವು ಹಾಲಿನ ಮೇಲೆಯೇ ನಡೆದವೇ ಹೊರತು ಮುಖವನ್ನು ತಗ್ಗಿಸುವುದೂ ಅವುಗಳಿಗೆ ತಿಳಿದಿರಲಿಲ್ಲ. ತುಂಬಾ ಹೊತ್ತು ಪ್ರಯತ್ನಪಟ್ಟು ಅವುಗಳ ಮುಖಕ್ಕೆ ಹಾಲನ್ನು ಸ್ಪರ್ಶಿಸುವುದನ್ನು ಕಲಿಸುವುದರಲ್ಲಿ ಸಾಕುಬೇಕಾಗಿತ್ತು. ತಾಯಿ ಬೆಕ್ಕು ಬರುವವರೆಗೆ ಮರಿಗಳಿಗೆ ಬಾಟಲಿ ಹಾಲು ಕುಡಿಸುವುದೋ ಅಥವಾ ಅವುಗಳ ಆರೈಕೆಯನ್ನು ಹೇಗೆ ಮಾಡಬಹುದು ಎಂದು ಗೂಗಲ್‌ನಲ್ಲಿ ಹುಡುಕಾಡಿದೆ. ತಾಯಿ ಬೆಕ್ಕು ಮಧ್ಯಾಹ್ನದೊಳಗೆ ಬರದಿರಳು ಎಂದು ಅಪ್ಪ ಅಮ್ಮ ಹೇಳಿದ್ದನ್ನು ನಂಬಿ ಸಮಾಧಾನಪಟ್ಟುಕೊಂಡು ಕಚೇರಿಗೆ ಹೋದೆ.

ಕಚೇರಿಯಲ್ಲೂ ಬೆಕ್ಕಿನ ಮರಿಗಳ ಕಣ್ಣೀರು ಪದೇ ಪದೇ ನೆನಪಾಗುತ್ತಿತ್ತು. ಆ ದಿನ ಎಂದಿಗಿಂತ ಬೇಗನೆ ಕೆಲಸ ಮುಗಿಸಿ ಮನೆಗೆ ಹೋದೆ. ಮನೆಯ ಚಾವಡಿಯಲ್ಲಿ ಮರಿಗಳೇ ನನ್ನನ್ನು ಎದುರುಗೊಂಡವು. 'ಭಾರೀ ಕಷ್ಟದಲ್ಲಿ ಹಾಲು ಕುಡಿಯುತ್ತವೆ' ಎಂಬ ಅಮ್ಮನ ಮಾತಿನಿಂದ ಸ್ವಲ್ಪ ಸಮಾಧಾನವಾಯಿತು. ಬೆಕ್ಕು ಎಲ್ಲಿಗೆ ಹೋಗಿರಬಹುದು ಎಂಬುದೇ ಮಿಲಿಯನ್ ಡಾಲರ್ ಪ್ರಶ್ನೆ.

ಕತ್ತಲು ಪೂರ್ಣವಾಗಿ ಆವರಿಸಿಕೊಳ್ಳುತ್ತಲೇ ಮರಿಗಳ ಕೂಗು ಒಂದೇ ಸಮನೆ ಹೆಚ್ಚಾಗತೊಡಗಿತು. ಮೊದಲ ಬಾರಿಗೆ ತಾಯಿಯ ಪ್ರೀತಿಯಿಂದ ವಂಚಿತವಾದ ಮರಿಗಳ ಕೂಗು ನನ್ನ ಭಾವಕೋಶಕ್ಕೆ ಇರಿದಂತಾಯಿತು. ಕಣ್ಣುಗಳು ತೇವಗೊಂಡವು. ತಾಯಿಗೆ ಗೊತ್ತಾದರೆ, 'ಗಂಡು ಮಗನಾಗಿ ಅಳ್ತೀಯಲ್ಲ' ಎನ್ನುತ್ತಾರೆಂದು ಮೌನಿಯಾಗಿದ್ದೆ. ತಾಯಿ ಬೆಕ್ಕು ಮೊಲೆಹಾಲಿನ ಧಾರೆಯೊಂದಿಗೆ ನಾಲಗೆಯಲ್ಲಿ ಮರಿಗಳನ್ನು ನೆಕ್ಕುತ್ತಾ ಅವುಗಳ ಮೈಕೈಯನ್ನು ಬಲಿಷ್ಠಗೊಳಿಸುತ್ತದೆ. ಮರಿಗಳಿಗೆ ಆಟದೊಂದಿಗೆ ಎಲ್ಲವನ್ನೂ ಕಲಿಸುತ್ತದೆ. ಛೇ... ಬೆಕ್ಕು ಇದ್ದಿದ್ದರೆ ಎಷ್ಟು ಚೆನ್ನಾಗಿತ್ತು ಎಂದುಕೊಂಡೆ. ಮರಿಗಳು ಅಳುವ ಸದ್ದಿಗೆ ಮನಸ್ಸು ಕರಗಿ, ನಾವೆಲ್ಲ ರಾತ್ರಿ ಊಟವನ್ನು ಶಾಸ್ತ್ರಕ್ಕೆಂಬಂತೆ ಮುಗಿಸಿದೆವು.

ರಾತ್ರಿ ಅಂಗಳದ ಒಂದು ತುದಿಯಲ್ಲಿ ಗಂಡುಬೆಕ್ಕೊಂದು ಅನುಮಾನಾಸ್ಪದವಾಗಿ ನಿಂತದ್ದು ಕಾಣಿಸಿತು. ಅದು 'ರೌಡಿಶೀಟರ್'ನಂತೆ ಕಂಡಿತು. ಅದರತ್ತ ಎಸೆಯಲು ಕೈಗೆ ಏನೂ ಸಿಗದೆ ನನ್ನ ಒಳ್ಳೆಯ ಶೂಗಳನ್ನೇ ಎಸೆದು ಆಕ್ರೋಶ ಹೊರಹಾಕಿದೆ.



ಮರುದಿನ ಬೆಳಕು ಹರಿದಾಗಲೂ ತಾಯಿ ಬೆಕ್ಕಿನ ಸುಳಿವಿಲ್ಲ. ಮತ್ತೆ ಹಿಂದಿನ ದಿನದಂತೆಯೇ ದಿನ ಕಳೆಯಿತು. ಪಕ್ಕದ ಮನೆಯವರು, ಬಂದವರು ಅನೇಕ ಕಥೆಗಳನ್ನು ಶುರುವಿಟ್ಟುಕೊಂಡರು. ತಾಯಿ ಬೆಕ್ಕು ಹೀಗ್ಮಾಡುತ್ತೆ, ಹಾಗ್ಮಾಡುತ್ತೆ ಎಂದೆಲ್ಲ ಹೇಳಿ ಕಾಲಹರಣವಾಯಿತೇ ಹೊರತು ಬೆಕ್ಕು ಬರಲಿಲ್ಲ.

ಸಂಜೆಯ ವೇಳೆಗೆ ನೆಲದಲ್ಲಿ ಬೆಳ್ಳನೆಯ ವಸ್ತುಗಳನ್ನು ಕಂಡಾಗ ಅದು ಹಾಲೇ ಇರಬಹುದು ಎಂದು ಊಹಿಸಿ ಬಾಯಿ ಇಡುವಷ್ಟು ಮರಿಗಳ ಬುದ್ಧಿ ಬೆಳೆಯಿತು. ಆದರೆ ಅವುಗಳಿಗೆ ಹಾಲು ಎಷ್ಟು ಬಾರಿ ಹಾಕಿದರೂ ಮೈ ನೇವರಿಸುವ, ಬೆಚ್ಚಗೆ ಇಡುವ ತಾಯಿಪ್ರೀತಿಯನ್ನು ನೀಡಲಾಗುತ್ತಿರಲಿಲ್ಲ.

ಮುಂಜಾನೆ ಮತ್ತು ರಾತ್ರಿಯ ಅವುಗಳ ಅಳುವನ್ನು ನಿಲ್ಲಿಸುವುದು ಸಾಧ್ಯವಾಗದಾಯಿತು. ಒಂದು ಪ್ರಯತ್ನ ಮಾಡೋಣವೆಂದು – ಒಂದು ಮರಿಯ ತಲೆ ಮತ್ತು ಕುತ್ತಿಗೆಯ ಭಾಗವನ್ನು ತೋರುಬೆರಳಿನಿಂದ ಹದವಾಗಿ ನೇವರಿಸಿದೆ. ಅದೇನು ಶಕ್ತಿಯೋ ಆ ನೇವರಿಕೆಗೆ? ಬಹುಶಃ ಅವುಗಳಿಗೆ ದಕ್ಕಬೇಕಾದ ಪ್ರೀತಿ ನೇವರಿಸುವ ಬೆರಳುಗಳಲ್ಲಿ ಪ್ರವಹಿಸಿರಬೇಕು. ಉಳಿದೆರಡೂ ಮರಿಗಳೂ ಕೈಗಳನ್ನು ಮೂಸುತ್ತಾ ಪಕ್ಕಕ್ಕೆ ಬಂದವು. ಕೆಲವೇ ಗಂಟೆಗಳಲ್ಲಿ ನೆಲದ ಮೇಲೆ ಕೈ ಇಟ್ಟಾಗ ಕೈಬೆರಳುಗಳನ್ನೇ ಹುಡುಕಿಕೊಂಡು ಬಳಿಗೆ ಬರುತ್ತಿದ್ದವು.

ಯಾವ್ಯಾವ ಸಮಯದಲ್ಲಿ ಏನೇನು ಬೇಕು ಅಂತ ತಿಳಿದುಕೊಳ್ಳುವಷ್ಟು ಬೆಕ್ಕಿನ ಮರಿಗಳು ಬೆಳೆದವು. ಇನ್ನೊಂದು ವಾರ ಅವುಗಳಿಗೆ ಸರಿಯಾದ ಆರೈಕೆ ಸಿಕ್ಕಿದರೆ, ಅವುಗಳ ಬದುಕು ಅವು ನೋಡಿಕೊಳ್ಳುತ್ತವೆ ಅನ್ನಿಸಿತು. 'ನಾನಿಲ್ಲದಾಗ ಆ ಮರಿಗಳನ್ನು ನೋಡಿಕೊಳ್ಳುವುದು ಸಂಪೂರ್ಣ ನಿಮ್ಮ ಜವಾಬ್ದಾರಿ' ಎಂದು ಅಮ್ಮನಿಗೆ ಹೇಳಿದಾಗ ಅವರು ಗೊಳ್ಳೆಂದು ನಕ್ಕು, 'ನನಗೆ ನೀವು ಇಬ್ಬರು ಮಕ್ಕಳು. ಇಬ್ಬರನ್ನೂ ಬೆಳೆಸಿದ್ದೇನೆ ಗೊತ್ತಾಯಿತಾ?' ಎಂದ ಅಮ್ಮನ ಮಾತು ಕೇಳಿ 'ಹೌದಲ್ಲ' ಎನ್ನಿಸಿತು.

ಮನೆಯೊಳಗೆ ಬೆಂಕಿ, ನೀರು ಮತ್ತು ಕಣ್ಣಾಮುಚ್ಚಾಲೆ ಆಡುತ್ತಿದ್ದ ಗಂಡುಬೆಕ್ಕಿನಿಂದ ಕಾಪಾಡುವುದು ದೊಡ್ಡ ಸವಾಲಾಗಿತ್ತು. ಎಲ್ಲವನ್ನೂ ಸೂಕ್ಷ್ಮವಾಗಿ ಗಮನಿಸುತ್ತ, ಎಚ್ಚರಿಕೆ ತಳೆಯುತ್ತಿದ್ದ ನಮಗೆ ಬೆಕ್ಕಿನ ಮರಿಗಳು ನಮ್ಮ ಕಾಲುಗಳಿಂದ ನಮ್ಮನ್ನು ಗುರುತು ಹಚ್ಚುವಷ್ಟು ಬೆಳೆದವು.

ಬದುಕಿನಲ್ಲಿ ಅಮ್ಮನ ಮಹತ್ವ ಎಂದರೇನು ಎಂದು ಅದುವರೆಗೂ ಪುಸ್ತಕಗಳಲ್ಲಿ ಓದಿದ್ದರೂ, ಸಿನಿಮಾಗಳಲ್ಲಿ ನೋಡಿದ್ದರೂ, ಲೇಖನ ಬರೆದಿದ್ದರೂ ಬೆಕ್ಕಿನ ಮರಿಗಳಿಂದ ಪೂರ್ಣವಾಗಿ 'ತಾಯ್ತನ' ಅನುಭವಕ್ಕೆ ಬಂದಿತು. ಅಂದಿನಿಂದ ಬೈಕ್, ಕಾರಿನಲ್ಲಿ ಹೋಗುವಾಗಲ್ಲ ಆ ತಾಯಿ ಬೆಕ್ಕು ಸಿಗಬಹುದಾ ಎಂದು ಕಾಯುತ್ತಿದ್ದೇನೆ. ಆ ಬೆಕ್ಕು ಬಂದರೆ ಅದಕ್ಕೆ ನಾವೆಲ್ಲ ಎಷ್ಟು ಕಷ್ಟಪಟ್ಟಿದ್ದೇವೆ ಗೊತ್ತಾ ಎಂದು ಹೇಳಬೇಕು ಯೋಚಿಸುತ್ತಲೇ ಇರುತ್ತೇನೆ.

ವಾಹನದಡಿ ಸಿಲುಕಿ ಸತ್ತ ಯಾವುದೇ ಪ್ರಾಣಿ ಕಂಡರೂ ಅದು ತನ್ನ ಕಂದಮ್ಮಗಳನ್ನು ಮನೆಯಲ್ಲೇ ಬಿಟ್ಟು ಬೇಟೆ ಅರಸಿ ಬಂದ ಪ್ರಾಣಿ ಇರಬಹುದೇ ಎಂದು ಆಲೋಚಿಸಿ ಮನಸ್ಸು ಮರುಗುತ್ತದೆ, ಭಾರವಾಗುತ್ತದೆ.

**ಪ್ರತಿಕ್ರಿಯಿಸಿ: feedback@sudha.co.in**